Read India
An Imprint of Pratham Books

# ಪೇಟೆಗೆ ಹೋಗುವುದು

ಮೀರಾ ತೆಂಡೂಲ್ಕರ್



Original Story (*Marathi*) Baazaar
by Meera Tendolkar
© Pratham Books 2004
Third Kannada Edition: 2009

Illustrations: Rijuta Ghate & Santosh Pujari
Kannada Translation: Pratham Books Team

ISBN: 81-8263-113-0

Registered Office:
PRATHAM BOOKS
633-634, 4th 'C' Main, 6th 'B' Cross,
OMBR Layout, Banaswadi, Bangalore 560 043
✆ 080-25429726 / 27 / 28

Regional Offices:
Mumbai ✆ 022-65162526,
New Delhi ✆ 011-65684113

Typesetting and Layout by: Trimiti Services

Printed by: XXXXXXXl

Published by PRATHAM BOOKS
www.prathambooks.org

The development of this book was sponsored by
Dubai Creek Round Table, Dubai, U.A.E.



Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc

# ಪೇಟೆಗೆ ಹೋಗುವುದು

ಕಲ್ಪನೆ

**ಮೀರಾ ತೆಂಡೂಲ್ಕರ್**

Illustrated by

Rijuta Ghate
Santosh Pujari

ಅನುವಾದ

**ಜಯಶ್ರೀ ದೇಶಪಾಂಡೆ**

ಅಮ್ಮ ನನ್ನನ್ನು ಕರೆದಳು. ಆಪೇಟೆಗೆ ಹೋಗಿ ಬರೋಣ ಬಾಬಿಬಿಎಂದಳು.

ಪೇಟೆಗೆ ಹೋಗುವುದು ಎಂದರೆ ನನಗೆ ಖುಷಿ.

ಅಲ್ಲಿ ತುಂಬಾ ಅಂಗಡಿಗಳು ಇರುತ್ತವೆ.

ತುಂಬಾ ಜನರೂ ಇರುತ್ತಾರೆ. ಅವರಲ್ಲಿ ಕೆಲವರು ವಸ್ತುಗಳನ್ನು ಕೊಂಡುಕೊಳ್ಳುವರು,

ಬೇರೆ ಬೇರೆ ಅಂಗಡಿಗಳಿಗೆ ಹೋಗುವರು.

ಇನ್ನು ಕೆಲವರು ಪೇಟೆಯಲ್ಲಿ ಸುಮ್ಮನೆ ತಿರುಗಾಡುತ್ತಾ , ಎಲ್ಲೆಲ್ಲಿ ಏನೇನು ಇದೆ ಎಂದು ನೋಡುವವರು.

ಅಮ್ಮ ಪೇಟೆಗೆ ಹೊರಟಿರುವಳು.

ಅಮ್ಮನಿಗೆ ಅಂಗಡಿಯಿಂದ ಏನು ತರ ಬೇಕಾಗಿದೆ ?


चंद्रकला
शर्टिंग्स सुटिंग्स
जगन
चप्पल मार्ट
नरेश
स्टील्स
NEW

ಮೊದಲು ನಾವಿಬ್ಬರೂ ದಿನಸಿ ಅಂಗಡಿಗೆ ಹೋದೆವು.

ದಿನಸಿ ಅಂಗಡಿ ಮಾಮ ತುಂಬಾ ವಸ್ತುಗಳನ್ನು ಮಾರಲು ಇಟ್ಟಿರುವನು.

ನಮಗೆ ಬೇಕಾಗಿರುವುದೆಲ್ಲ ಅಲ್ಲಿ ದೊರೆಯುತ್ತದೆ.

ಮನೆಗೆ ಬೇಕಾಗುವ ಬೇಳೆಕಾಳುಗಳೂ ಅಲ್ಲಿವೆ.

ಬಣ್ಣಬಣ್ಣದ ಪೊಟ್ಟಣಗಳಲ್ಲಿ ಇನ್ನೂ ಬೇರೆ ಬೇರೆ ವಸ್ತುಗಳನ್ನು ಸಾಲುಸಾಲಾಗಿ ಜೋಡಿಸಿ ಇಟ್ಟಿರುತ್ತಾರೆ.

ಅಮ್ಮನಿಗೆ ಗೋಧಿ, ಸಕ್ಕರೆ, ಬೇಳೆಕಾಳುಗಳು ಬೇಕಾಗಿವೆ.

ಅವಳು ಅವೆಲ್ಲವನ್ನೂ ಕೊಂಡು ಕೊಂಡಳು.  ನಾವು ಅವೆಲ್ಲವನ್ನೂ ಎತ್ತಿಕೊಂಡು ಹೋಗಬೇಕಿಲ್ಲ.

ಅಂಗಡಿ ಮಾಮನೇ ಅವನ್ನೆಲ್ಲ ನಮ್ಮ ಮನೆಗೆ ಕಳಿಸಿ ಕೊಡುತ್ತಾನೆ.


10%
છૂટ
नया
RIN

ಅನಂತರ ನಾವಿಬ್ಬರೂ ಮುಂದೆ ಹೊರಟೆವು.

ಅಲ್ಲೊಂದು ತರಕಾರಿ ಅಂಗಡಿ ಇದೆ.

ಅಮ್ಮ ಅದರ ಬಳಿ ನಿಂತಾಗ ಱನಾವು ತರಕಾರಿಗಳನ್ನು ಕೊಳ್ಳೋಣವೆ ?ಟಿಟಿಎಂದು ಕೇಳಿದೆ.

ಆಗ ತರಕಾರಿ ಮಾರುವ ಹೆಂಗಸು ಱಬನ್ನಿ ಅಮ್ಮ ಬನ್ನಿ,  ತಾಜಾ ತರಕಾರಿ ಇದೆ.

ತುಂಬಾ ಚೆನ್ನಾಗಿದೆ, ತೆಗೆದುಕೊಳ್ಳಿಟಿಟಿ ಎಂದು ಕರೆದಳು.

ಅಮ್ಮ ಱಇಲ್ಲ,  ನಮಗೆ ತರಕಾರಿ ಬೇಡಟಿಟಿ ಅಂದಳು.



ಅಮ್ಮ ಎಲ್ಲಿ ನಿಂತಿದ್ದಾಳೆ ?  ಎಂದು ನಾನು ಆಚೆ ಈಚೆ ನೋಡಿದೆ.

ಅಲ್ಲಿ ಹತ್ತಿರದಲ್ಲೇ ಎಣ್ಣೆ ಮಾರುವ ಅಂಗಡಿ ಇದೆ.

ಟಿಅಮ್ಮ ಎಣ್ಣೆ ಕೊಳ್ಳಲು ಬಂದಿರುವಳೇ ?ಟಿಅನಿಸಿತು.

ಅಂಗಡಿಯಲ್ಲಿ ತೆಂಗಿನ ಎಣ್ಣೆ, ಕಡ್ಲೆ ಬೀಜದ ಎಣ್ಣೆ, ಸಾಸಿವೆ ಎಣ್ಣೆ, ತಾಳೆ ಎಣ್ಣೆ,

ಶುದ್ಧ ಮಾಡಿದ ಎಣ್ಣೆಗಳು ಮಾರಲು ಇಟ್ಟಿವೆ.  ಕೆಲವು ಎಣ್ಣೆ ಡಬ್ಬಗಳಲ್ಲಿವೆ,

ಇನ್ನು ಕೆಲವು ಬಾಟಲಿಗಳಲ್ಲಿ ಇವೆ.  ಟಇತ್ತೀಚೆಗೆ ಎಣ್ಣೆ ಬೆಲೆಗಳು

ತುಂಬಾ ಜಾಸ್ತಿ ಆಗಿವೆ ಟಿಟಿ ಅಮ್ಮ ಅಂಗಡಿಯವನಿಗೆ ಹೇಳಿದಳು.

ಅವನಿಗೆ ಬೇಜಾರಾಯಿತು.



रसिका
शोभा
शुद्ध
रिफाईंड तेल
खोबरेल तेल
राई तेल
शेंगदाणा तेल
पाम तेल
OILDEPOT

ಮುಂದೆ ಸಮೀಪದಲ್ಲಿಯೇ ಮೀನಿನ ಮಾರುಕಟ್ಟೆ ಇದೆ.

ನಾವಿಬ್ಬರೂ ಅಲ್ಲಿಗೆ ಹೋದೆವು. ಎಷ್ಟೋ ಜನರಿಗೆ ಇಲ್ಲಿನ ವಾಸನೆ ಹಿಡಿಸುವುದಿಲ್ಲ.

ನನಗೆ ಮಾತ್ರ ಮೀನು ಎಂದರೆ ಇಷ್ಟ.


ಮೀನು ಮಾರುವ ಹೆಂಗಸರು ಬಣ್ಣಬಣ್ಣದ ಸೀರೆ ಉಟ್ಟುಕೊಂಡಿದ್ದಾರೆ.

ಅವರು ತಲೆಯಲ್ಲಿ ಹೂವು ಮುಡಿದಿರುವರು.

ಓ...... ಇಲ್ಲೆಲ್ಲಾ ದಪ್ಪದಪ್ಪದ ಬೆಕ್ಕುಗಳು ಇವೆ.

ಅವು ಏನನ್ನೂ ಮಾಡದೆ ಸೋಮಾರಿಯಾಗಿ ಕುಳಿತಿವೆ.

ಮೀನು ತಿಂದು ತಿಂದು ಅವು ಉಬ್ಬಿಕೊಬ್ಬಿವೆ.



ಹಾಲು, ಮೊಸರು, ಗಿಣ್ಣು

ಮುಂತಾದವುಗಳನ್ನು ಮಾರುವ ಹಾಲಿನ ಕೇಂದ್ರದ ಬಳಿಗೆ ನಾನು, ಅಮ್ಮ ಹೋದೆವು.

ಇಲ್ಲಿ ಯಾವಾಗಲೂ ತಾಜಾ ಹಾಲು, ಮತ್ತು ತಣ್ಣನೆಯ ಸಿಹಿಯಾದ ಹಾಲು ಸಿಗುತ್ತವೆ.

ಅಮ್ಮ ತುಪ್ಪವನ್ನೂ, ಪನ್ನೀರನ್ನೂ ಕೊಂಡು ಕೊಂಡಳು.

ಇಲ್ಲಿ ಐಸ್‌ಕ್ರೀಂ ಮಾತ್ರ ದೊರೆಯುವುದಿಲ್ಲ.

ಅವರು ಅದನ್ನು ಏಕೆ ಇಲ್ಲಿ ಮಾರಬಾರದು?

ನನಗೆ ಐಸ್‌ಕ್ರೀಂ ಎಂದರೆ ತುಂಬಾ ಪ್ರೀತಿ.

ನಾನು ಎಲ್ಲಾ ಬಗೆಯ ಐಸ್‌ಕ್ರೀಂ ಸಹ ತಿನ್ನುತ್ತೇನೆ.

ಅಮ್ಮ ನನಗೆ ಅದನ್ನು ಕೊಡಿಸ ಬಹುದೆ ? ನನಗೆ ತುಂಬಾ ಆಸೆ ಆಗುತ್ತಾ ಇದೆ !


दूध
थंडा -7
MILK-

ಕೊಂಚ ದೂರ ನಡೆದರೆ ಪಾತ್ರೆಗಳನ್ನು ಮಾರುವ ಅಂಗಡಿ ಸಿಗುತ್ತದೆ.

ನಾವಿಬ್ಬರೂ ಅಲ್ಲಿಗೆ ಹೋದೆವು.

ಱಅಮ್ಮ ನೀನು ಪಾತ್ರೆ ಕೊಂಡು ಕೊಳ್ಳುವೆಯಾ ?ಱಎಂದು ನಾನು ಕೇಳಿದೆ.

ಱಇಲ್ಲಱಅಮ್ಮ ಹೇಳಿದಳು.  ಅವಳಿಗೆ ಇಲ್ಲಿ ಏನನ್ನೂ ಕೊಂಡು ಕೊಳ್ಳಬೇಕಾಗಿಲ್ಲ.

ಈ ಅಂಗಡಿಯ ತುಂಬಾ ನಾನಾ ಬಗೆಯ ಪಾತ್ರೆಗಳು, ಡಬ್ಬಿಗಳು,


ತಟ್ಟೆಗಳು, ಲೋಟಗಳು, ಬಟ್ಟಲು, ಚಮಚೆ, ಬಿಂದಿಗೆಗಳೆಲ್ಲ

ಲಕಲಕ ಹೊಳೆಯುತ್ತ ಸಾಲುಸಾಲಾಗಿ ಕುಳಿತಿವೆ.

ಆದರೆ, ಅಂಗಡಿಯಲ್ಲಿ ಮಾರಾಟಗಾರನೇ ಇಲ್ಲ.

ಹಬ್ಬಗಳು ಬಂದಾಗ ಅಥವಾ ಮದುವೆ ಮುಂತಾದ ಸಮಾರಂಭಗಳು ಇದ್ದಾಗ,

ಇಲ್ಲಿ ತುಂಬಾ ಜನರು ಬಂದು ಪಾತ್ರೆಗಳನ್ನು ಕೊಂಡು ಕೊಳ್ಳುತ್ತಾರೆ.


स्टील वर्क

ಇನ್ನೊಂದು ಬದಿಯಲ್ಲಿ ಬಟ್ಟೆ ಅಂಗಡಿ ಇದೆ.  ಅಮ್ಮ ನನ್ನೊಂದಿಗೆ

ಅಲ್ಲಿಗೆ ನಡೆದಾಗ ನಾನು ಕೂಗಿ ಹೇಳಿದೆ ಱಅಮ್ಮಾ, ಇಲ್ಲಿ ನೀನು ಒಳಗೆ ಹೋಗಬೇಡ ಱ.

ಬಟ್ಟೆ ಅಂಗಡಿಗಳಲ್ಲಿ ಅಮ್ಮ ತುಂಬಾ ಸಮಯವನ್ನು ಕಳೆಯುತ್ತಾಳೆ.


ಆಗ ನನಗೆ ಬೇಜಾರಾಗುತ್ತದೆ. ಆದರೆ ಅಮ್ಮ ಒಳಗೆ ಹೊರಟಳು.

ಱಬನ್ನಿ, ಬನ್ನಿಱಎಂದು ಬಟ್ಟೆ ಅಂಗಡಿಯ ಮಾಮ ಕರೆದನು.

ಅಮ್ಮನಿಗೆ ನೂರಾರು ಬಟ್ಟೆಗಳನ್ನು ತೆಗೆಸಿ ನೋಡುವುದು ಬಹಳ ಇಷ್ಟ.

ಅಂಗಡಿ ಮಾಮ ಅವಳಿಗೆ ಅನೇಕ ಸೀರೆಗಳನ್ನು ತೆಗೆದು ಬಿಡಿಸಿ ತೋರಿಸಿದನು.

ಎಲ್ಲವನ್ನೂ ನೋಡಿದರೂ, ಅಮ್ಮ ಏನನ್ನೂ ಕೊಂಡು ಕೊಳ್ಳದೆ ಹೊರಗೆ ಬಂದಳು.



ಆಹಾ! ಕೊನೆಗೂ ಬಂದಿತು ನನ್ನ ಇಷ್ಟದ ಅಂಗಡಿ ! ಬೊಂಬೆಗಳ ಅಂಗಡಿ !!

ನೂರಾರು ಬೊಂಬೆಗಳು, ಆಟಿಕೆಗಳಿಂದ ತುಂಬಿ ತುಳುಕುವ ಅಂಗಡಿ.

ನನಗೆ ಬಹಳ ಇಷ್ಟವಾದ ಜಾಗ ಇದೇ.

ಅಗೋ ಅಲ್ಲಿ ಎಷ್ಟು ದೊಡ್ಡ ಕರಡಿ! ಓ...ಓ...ಈ ಸ್ಕೂಟರ್ ಎಷ್ಟು ಚಂದ ? !

ಅದು ನನಗೆ ಬೇಕು ಅನಿಸುತ್ತದೆ. ಇಲ್ಲಿ ಜುಮ್ಮೆಂದು ಓಡುವ ಟ್ರಕ್ ಇದೆ.

ಅದೂ ಕೂಡ ನನಗೆ ಬೇಕು.

ಊಅಮ್ಮಾ ಅಮ್ಮಾ ನಾನದನ್ನು ಮುಟ್ಟಿ ನೋಡಲೇ? ಊ ನಾನು ಅವಳನ್ನು ಕೇಳಿದೆ.

ನನಗೆ ಈ ಬೊಂಬೆ ಇವತ್ತೇ ಬೇಕು ಎಂದು ನಾನು ಕೇಳುವುದಿಲ್ಲ. ಹಠ ಮಾಡುವುದಿಲ್ಲ.

ಊನನ್ನ ಹುಟ್ಟು ಹಬ್ಬಕ್ಕೆ ನೀನು ಬೊಂಬೆ ಕೊಡಿಸುತ್ತೀಯಾ ಅಲ್ಲವೆ ? ಊಅಮ್ಮ ನಗುತ್ತಾಳೆ.

ಆಗ ನನಗೆ ತುಂಬಾ ಸಂತೋಷವಾಗುತ್ತದೆ.





राई तेल
शेंग दाणा तेल
पाम तेल



My name is Swati and one day I'll be a good teacher like all my favourite teachers. I enjoy wearing new clothes and dancing to film songs also. I'd love to learn to use the computer.
Thank you for buying this book. My friends and I will get to read many more books in our library because you bought this book.

**Meera Tendolkar** has had a long association with the non-governmental organisation, Pratham. She enjoys working with children and likes to write for them.

**Rijuta Ghate** is a graduate of Sir JJ Institute of Applied Arts, Mumbai with a specialization in illustration. She is fond of cartoons, animation and illustrating for children's books. She has worked with animation film 'Hanuman' and other animation projects. She has illustrated many books and worked for NGOs such as Pratham.
**Santosh Pujari** likes illustrating children's books and have worked with NGO, Pratham.

ಮಕ್ಕಳು ತಮ್ಮ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಮಾರ್ಕೆಟ್ಟಿಗೆ ಹೋಗುವುದು ಅಂತಹ ಅನುಭವಗಳು ಹೇಗೆ ಮಜಾ ಕೊಡುತ್ತವೆಂದು ತಿಳಿಸುತ್ತದೆ.

**ಈ ಮಾಲಿಕೆಯ ಇನ್ನೊಂದು ಪುಸ್ತಕ**

| | |
|---|---|
| ಮರಳಿ ಮನೆಗೆ | ಪುಸ್ತಕ ಕೊಳ್ಳಲು ಹೋದೆವು ನಾವು |
| ಕನಸಿನ ಹಾರಾಟ | ಓ....ನನ್ನ ಬ್ಯಾಟ್ ಎಲ್ಲಿ?! |

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ : www.prathambooks.org

ನಮ್ಮ ಪುಸ್ತಕಗಳು ಕನ್ನಡ, ಇಂಗ್ಲೀಷ್, ಹಿಂದಿ, ತೆಲಗು, ತಮಿಳು, ಮರಾಠಿ, ಗುಜರಾತಿ, ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯ ಇವೆ.

PRATHAM BOOKS

ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ, ಮಕ್ಕಳಿಗೆ ಎಟುಕುವ ಬೆಲೆಯಲ್ಲಿ ನೀಡುವ ಲಾಭರಹಿತ ಪ್ರಕಾಶನ ಸಂಸ್ಥೆ 'ಪ್ರಥಮ್ ಬುಕ್ಸ್'

Age Group: 3-6 years
Petege Hoguvudu (Kannada)
MRP Rs. 15.00

ISBN 81-8263-113-0